ಕರ್ನಾಟಕ ಸರ್ಕಾರ
(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ:ಜಅಇ/ಉಕೃನಿ/ಜಕೋ/ಕೃಅ2/PMKSY-WD/ಅಬಿ/48/19-20

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09
ದಿನಾಂಕ:25.9.2019
email:wdd.cell@gmail.com

## ಕಛೇರಿ ಅದೇಶ

ವಿಷಯ: ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC) ಕಾರ್ಯಕ್ರಮದಡಿ 2019-20 ನೇ ಸಾಲಿನ ಮೊದಲ ಕಂತಿನ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಈ ಕಛೇರಿಯ ಪತ್ರ ಸಂಖ್ಯೆ:ಜಅಇ/ಲೆಕ್ಕ-5/ಲೆಕ್ಕ ಪತ್ರ ಸಮಿತಿ/2018-19, ದಿನಾಂಕ:03.11.2018, 15.12.2018 & 11.01.2019
2. ಕೇಂದ್ರ ಭೂಸಂಪನ್ಮೂಲ ಇಲಾಖೆಯ ಪತ್ರ ಸಂಖ್ಯೆ: Z-11011/02/2017-PPC (pt) ದಿನಾಂಕ:14.5.2019
3. ಈ ಕಛೇರಿಯ ಪತ್ರ ಸಂ:ಜಅಇ/ಉಕೃನಿ/ಕೃಅ-2/ PMKSY-WDC/AAP/118/18-19 ದಿನಾಂಕ: 27.05.2019
4. ದಿನಾಂಕ:21.06.2019 ರಂದು ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯ (SLSC) ಸಭೆಯ ನಡವಳಿಗಳು
5. ಜಅಇ/ಉಕೃನಿ/ಕೃಅ2/PMKSY-WD/B3C/76/17-18, ದಿನಾಂಕ:19.09.2019
6. ಸರ್ಕಾರದ ಆದೇಶ ಸಂ:ಕೃಇ/15/ಕೃಉಇ 2018/ಬೆಂಗಳೂರು ದಿ:28.8.2019
7. ಜಅಇ/ಲೆಕ್ಕ-5/PMKSY/Lapsed 16-17 &17-18/19-20, ದಿನಾಂಕ:18.09.2019,
8. ಜಕೃನಿ/ಉ/ತಾಂ/PMKSY-WD.BIII/ಅಬಿ/2019-20, ದಿನಾಂಕ:08.09.2019
9. ಜಂಕೃನಿ/ಕೃ.ಇ/ಚಿಮರ/ಅಬಿ/ಬ್ಯಾಚ್3/2019-20, ದಿನಾಂಕ:23.09.2019
10. ಜಕೃನಿ/ರಾನ/ತಾ-3/ PMKSY-WD/ಬ್ಯಾ-4/ಅಬೇ/2019-20, ದಿನಾಂಕ:09.09.2019
11. ಜಕೃನಿ/ವಿ/ತಾಂ-4/ಬ್ಯಾಚ್-3/ಅನುದಾನ/2019-20, ದಿನಾಂಕ:07.09.2019
12. ಜಕೃನಿಮಂ/ತಾಅ-3/ PMKSY-WD/ಅಬೇ/2019-20, ದಿನಾಂಕ:23.09.2019
13. ಜಕೃನಿ/ಬ/ PMKSY-WD/ಹಂತ-4/ಅಬೇ/2019-20, ದಿನಾಂಕ:23.09.2019
14. ಜಕೃನಿ/PMKSY-WD/ಅಬಿ/2019-20, ದಿನಾಂಕ:23.09.2019
15. ಜಕೃನಿ/ಮಂ/PMKSY-WD/B-III/Action Plan/2019-20, ದಿನಾಂಕ:04.09.2019
16. ಜಕೃನಿ/ಚಿದು/ಲೆಕ್ಕ-3/ PMKSY-WD/B-3/ಅಬೇ/2019-20, ದಿನಾಂಕ:24.09.2019
17. ಜಕೃನಿ/ಬೆಂ/PMKSY-WD/ಅನುದಾನ/2019-20, ದಿನಾಂಕ:24.09.2019
18. ಜಕೃನಿ/ಚಾನ/PMKSY-WD/ಜಿಮಹೊಗುನಾ/ವೇತನ/2019-20, ದಿನಾಂಕ:23.09.2019
19. ಜಅಇ/ಪಿಎಂಕೆಸ್‌ವೈ-ಜಅ/ಬ್ಯಾಚ್-III&IV/ಉಮೌಕ&ದಾ/ಸಮಿತಿಸಭಾ/2017-18, ದಿನಾಂಕ:19.09.2019

*****

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:21.6.2019 ರಂದು ಮುಖ್ಯಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ (ಉಲ್ಲೇಖ-4) ಜರುಗಿದ State Level Sanctioning Committe (SLSC)

ಸಭೆಯಲ್ಲಿ 2019-20 ನೇ ಸಾಲಿಗೆ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ಒಟ್ಟು ರೂ.10696.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿದೆ ಹಾಗೂ ಉಲ್ಲೇಖ (2) ರಲ್ಲಿ ಕೇಂದ್ರ ಭೂ ಸಂಪನ್ಮೂಲ ಇಲಾಖೆಯಿಂದ 2019-20 ನೇ ಸಾಲಿಗೆ ನಿಗಧಿಪಡಿಸಲಾದ ಅನುದಾನವನ್ನು ಬ್ಯಾಚ್-III ರ ಯೋಜನೆಗಳು 2019-20 ನೇ ಸಾಲಿನ ಅಂತ್ಯದವರೆಗೆ ವಿಸ್ತರಣೆಯಾದರೆ ಬಳಸಿಕೊಳ್ಳಲು ಅನುಮತಿಯನ್ನು ಸಹ ನೀಡಲಾಗಿದೆ. ಬ್ಯಾಚ್-III ರ ಯೋಜನೆಗಳನ್ನು ಕೇಂದ್ರ ಭೂಸಂಪನ್ಮೂಲ ಇಲಾಖೆಯು 2019-20 ನೇ ಸಾಲಿನ ಅಂತ್ಯದವರೆಗೆ ವಿಸ್ತರಿಸಿದೆ.

ಪ್ರಸ್ತುತ ಉಲ್ಲೇಖಿತ ಪತ್ರ (6) ರ ಸರ್ಕಾರದ ಆದೇಶದಲ್ಲಿ 2016-17 ಮತ್ತು 2017-18 ನೇ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿ ಖಜಾನೆಯಲ್ಲಿ ಉಳಿಕೆಯಾಗಿದ್ದ ರೂ.595.00 ಲಕ್ಷಗಳ ಅನುದಾನವನ್ನು ಸರ್ಕಾರವು ಮರುಮೌಲ್ವಿಕರಣಗೊಳಿಸಿ, 2019-20 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯ ಪ್ರಕಾರ ಅನುಷ್ಠಾನ ಮಾಡಲು ಬಿಡುಗಡೆಗೊಳಿಸಿರುತ್ತದೆ. (ಲೆಕ್ಕ ಶೀರ್ಷಿಕೆ:2402-00-102-0-30, **ಉಪ ಶಿರ್ಷಿಕೆ ಸಾಮಾನ್ಯ (139) ದಡಿ ರೂ.456.44 ಲಕ್ಷಗಳು, ಉಪ ಶಿರ್ಷಿಕೆ ಪರಿಶಿಷ್ಠ ಜಾತಿ ಉಪಯೋಜನೆಯಡಿ (422) ರೂ.111.99 ಲಕ್ಷಗಳನ್ನು ಹಾಗೂ ಗಿರಿಜನ ಉಪಯೋಜನೆಯಡಿ (423) ರೂ.26.57 ಲಕ್ಷ**) ಬಿಡುಗಡೆಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

ಆದುದರಿಂದ ಸದರಿ ಅನುದಾನದಲ್ಲಿ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ರೂ.474.27 ಲಕ್ಷಗಳ ಅನುದಾನವು ಲಭ್ಯವಿರುತ್ತದೆ (ಲೆಕ್ಕ ಶೀರ್ಷಿಕೆ:2402-00-102-0-30, **ಉಪ ಶಿರ್ಷಿಕೆ ಸಾಮಾನ್ಯ (139) ದಡಿ ರೂ.367.26 ಲಕ್ಷಗಳು ಮತ್ತು ಉಪ ಶಿರ್ಷಿಕೆ ಪರಿಶಿಷ್ಠ ಜಾತಿ ಉಪಯೋಜನೆಯಡಿ (422) ರೂ.107.10 ಲಕ್ಷಗಳು**).

ಉಲ್ಲೇಖಿತ ಪತ್ರಗಳಲ್ಲಿನ (8 ರಿಂದ 19) ಕೋರಿಕೆಯಂತೆ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದ ಬ್ಯಾಚ್-III ಮತ್ತು ಬ್ಯಾಚ್-IV ರ ಯೋಜನೆಗಳ ನುಷ್ಠಾನಕ್ಕೆ ಈ ಕೆಳಕಂಡ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

## ಆದೇಶ

**ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದ ಬ್ಯಾಚ್-III ಮತ್ತು ಬ್ಯಾಚ್-IV ರ ಯೋಜನೆಗಳ ವಿವಿಧ ಘಟಕಗಳ ಅನುಷ್ಠಾನಕ್ಕೆ ಒಟ್ಟು ರೂ.474.27 ಲಕ್ಷಗಳ ಅನುದಾನವನ್ನು ಈ ಕೆಳಕಂಡಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿ 2019-20 ನೇ ಸಾಲಿನ ಕ್ರಿಯಾ ಯೋಜನೆ ಪ್ರಕಾರ ವೆಚ್ಚ ಭರಿಸಲು ಸೂಚಿಸಿದೆ.

*ರೂ.ಲಕ್ಷಗಳಲ್ಲಿ*

| ಕ್ರ.ಸಂ | ಜಿಲ್ಲೆ | ಬ್ಯಾಚ್‌ನ ಹೆಸರು | ಲೆಕ್ಕ ಶೀರ್ಷಿಕೆ:2402-00-102-0-30 (ಯೋಜನೆ) | | ಒಟ್ಟು (4+5) |
|---|---|---|---|---|---|
| | | | ಪ್ರಧಾನ ಕಾಮಗಾರಿಗಳು (139) | ಪರಿಶಿಷ್ಟ ಜಾತಿ ಉಪ ಯೋಜನೆ (422) | |
| 1 | 2 | 3 | 4 | 5 | 6 |
| 1 | ಉಡುಪಿ | ಬ್ಯಾಚ್-III | 21.35 | 10.00 | **31.35** |
| 2 | ಚಿಕ್ಕಬಳ್ಳಾಪುರ | ಬ್ಯಾಚ್-III | 57.50 | 32.01 | **89.51** |
| 3 | ರಾಮನಗರ | ಬ್ಯಾಚ್-III | 57.50 | 20.00 | **77.50** |
| 4 | ಮಂಡ್ಯ | ಬ್ಯಾಚ್-III | 16.60 | - | **16.60** |
| 5 | ಶಿವಮೊಗ್ಗ | ಬ್ಯಾಚ್-III | 32.87 | 10.00 | **42.87** |
| 6 | ದಕ್ಷಿಣ ಕನ್ನಡ | ಬ್ಯಾಚ್-III | 40.00 | 10.00 | **50.00** |
| 7 | ಚಿತ್ರದುರ್ಗ | ಬ್ಯಾಚ್-III | 10.00 | - | **10.00** |
| 8 | ಬೆಂಗಳೂರು | ಬ್ಯಾಚ್-III | 8.40 | - | **8.40** |

| 1 | 2 | 3 | 4 | 5 | 6 |
|---|---|---|---|---|---|
| 9 | ಚಾಮರಾಜನಗರ | ಬ್ಯಾಚ್-III | 5.32 | - | **5.32** |
| 10 | ವಿಜಯಾಪುರ | ಬ್ಯಾಚ್-IV | 30.00 | 5.00 | **35.00** |
| 11 | ಬಳ್ಳಾರಿ | ಬ್ಯಾಚ್-IV | 15.14 | - | **15.14** |
| 12 | ಕೇಂದ್ರ ಕಛೇರಿ (ಉಸ್ತುವಾರಿ ಮತ್ತು ಮೌಲ್ಯಮಾಪನ | ಬ್ಯಾಚ್-III & ಬ್ಯಾಚ್-IV | 72.58 | 20.00 | **92.58** |
| | ಒಟ್ಟು | | **367.26** | **107.01** | **474.27** |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ಕ್ರಿಯಾ ಯೋಜನೆಯ ಮತ್ತು ಅನುಮೋದಿತ ಡಿ.ಪಿ.ಆರ್ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು. ಮುಕ್ತಾಯ ಹಂತದಲ್ಲಿರುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.
2. ಕೇಂದ್ರ ಸರ್ಕಾರದ ಸಾಮಾನ್ಯ ಮಾರ್ಗಸೂಚಿ-2008 (ಪರಿಷ್ಕರಿಸಿದ ಆವೃತಿ-2011) ರ ಹಾಗೂ ಜಲಾನಯನ ಯೋಜನೆಗಳ ಕಾರ್ಯಚರಣೆ ಕೈಪಿಡಿಯ ಹಾಗೂ ಕೇಂದ್ರ ಕಚೇರಿಯಿಂದ ಯೋಜನೆಯ ಅನುಷ್ಠಾನದ ಕುರಿತು ಈಗಾಗಲೇ ನೀಡಲಾದ ಸುತ್ತೋಲೆಗಳು ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
3. ಜಲಾನಯನ ಚಟುವಟಿಕೆ/ಕಾಮಗಾರಿಗಳನ್ನು ಅನುಮೋದಿತ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿಯೇ ಮಾತ್ರ ಅನುಷ್ಠಾನ ಮಾಡುವುದು (Watershed activities should be implented within in the approved project area)
4. ಜಲಾನಯನ ಚಟುವಟಿಕೆ ಮತ್ತು ಕಾಮಗಾರಿಗಳನ್ನು ಅನುಮೋದಿತ ಯೋಜನಾ ವೆಚ್ಚದ ಮಿತಿಯೊಳಗೆ ಅನುಷ್ಠಾನ ಮಾಡುವುದು (Within the approved project cost), ಜಲಾನಯನ ಕಾಮಗಾರಿ ಹೊರತುಪಡಿಸಿ ಉಳಿದ ಘಟಕಗಳಡಿ ಸದರಿ ಘಟಕಗಳಿಗೆ ನಿಗಧಿಯಾದ ಅನುದಾನಕ್ಕಿಂತ ಹೆಚ್ಚಿನ ಅನುದಾನ ಬಳಕೆಗೆ ಅವಕಾಶವಿರುವುದಿಲ್ಲ.
5. ಖಾಸಗಿ ಭೂಮಿಯಲ್ಲಿ ಕಾರ್ಯಗತಗೊಳಿಸುವ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ (Natural Resource mangement) ಸಂಭಂದಿಸಿದ ಕಾಮಗಾರಿ/ಚಟುವಟಿಕೆಗಳಿಗೆ ಕಡ್ಡಾಯವಾಗಿ ನಿಯಾಮನುಸಾರ ಫಲಾನುಭವಿ ವಂತಿಗೆಯನ್ನು ಸಂಗ್ರಹಿಸಿ ಜಲಾನಯನ ಅಭಿವೃದ್ಧಿ ನಿದಿಗೆ ಜಮಾ ಮಾಡುವುದು.
6. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಅವಶ್ಯಕತೆ ಇದ್ದಲ್ಲಿ ಅಂತರಬ್ಯಾಚ್ (Inter batch) ಬದಲಾವಣೆ ಮಾಡಿಕೊಳ್ಳುವುದು. ಅಂತರ ಬ್ಯಾಚ್ (Inter batch) ಬದಲಾವಣೆ ಮಾಡಿಕೊಳ್ಳುವ ಮುನ್ನ ಆಯಾ ಬ್ಯಾಚ್‌ನ ಅನುಮೋದಿತ ಯೋಜನಾ ವೆಚ್ಚದ ಗರಿಷ್ಠ ಮೀತಿ ಮೀರದಂತೆ ಕ್ರಮವಹಿಸುವುದು.
7. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.
8. ಬಿಡುಗಡೆ ಮಾಡಲಾದ ಅನುದಾನದಿಂದ ವಾಹನಗಳು/ಫೋಟೋಕಾಪಿಯರ್/ವಿಡಿಯೋ ರೆಕಾರ್ಡ್‌ರ್/ಪ್ರೊಜೆಕ್ಟರ್, ಇನ್ನಿತರೆ ಯಾವುದೇ ಕ್ಯಾಪಿಟಲ್ ವಸ್ತುಗಳನ್ನು ಖರೀದಿಸಲು ಅನುಮತಿಸಲಾಗಿರುವುದಿಲ್ಲ.

9. ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರು/ಸಹಾಯಕ ಕೃಷಿ ನಿರ್ದೇಶಕರು ಎಲ್ಲಾ ಜಲಾನಯನ ಸಮಿತಿಗಳಲ್ಲಿ ಕನಿಷ್ಠ ಉಳಿಕೆ ಅನುದಾನ ಇರುವಂತೆ ಖಾತ್ರಿಪಡಿಸಿಕೊಳ್ಳಬೇಕು. ನಿಯಮಿತವಾಗಿ ಅನುಷ್ಠಾನ ಮಾಡಲಾದ ಚಟುವಟಿಕೆಗಳ ವಿವರಗಳನ್ನು ಎಂ.ಐ.ಎಸ್‌ನಲ್ಲಿ ಹಾಗೂ ಮಾಡರೇಟ್ ಮಾಡಲಾದ ಛಾಯಾ ಚಿತ್ರಗಳನ್ನು ಭುವನ್ ಪೋರ್ಟಲ್‌ನಲ್ಲಿ ತಪ್ಪದೇ ಅಪ್‌ಲೋಡ್ ಮಾಡಬೇಕು.

10. ಅನುಷ್ಠಾನ ಮಾಡುವ ಸಂಸ್ಥೆಯು (ಜಂಟಿ ಕೃಷಿ ನಿರ್ದೇಶಕರು ಕಛೇರಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಮತ್ತು ಜಲಾನಯನ ಸಮಿತಿಗಳು) ವೆಚ್ಚ ಮಾಡಲಾದ ವಿವರಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು. ಲೆಕ್ಕ ತಪಾಸಣಾ ವರದಿ ಮತ್ತು ಉಪಯೋಗಿತ ಪತ್ರವನು ಆದಷ್ಟೂ ಬೇಗ ಆರ್ಥಿಕ ವರ್ಷದ ನಂತರ ಅಂದರೆ ಮೇ ತಿಂಗಳ ಮೊದಲ ವಾರದಲ್ಲಿ ಸಲ್ಲಿಸಬೇಕು. ಜಂಟಿ ಕೃಷಿ ನಿರ್ದೇಶಕರು ಪ್ರತಿ ತಿಂಗಳು 5ನೇ ತಾರೀಖು ಅಥವಾ ಅದಕ್ಕೂ ಮುನ್ನ ಮಾಸಿಕ ಪ್ರಗತಿ ವರದಿಗಳನ್ನು ಭೌತಿಕ ಮತ್ತು ಆರ್ಥಿಕ ವಿವರಗಳೊಂದಿಗೆ ಕೇಂದ್ರ ಕಛೇರಿಯಿಂದ ಒದಗಿಸಲಾದ ನಮೂನೆಗಳ ಪ್ರಕಾರ ಒದಗಿಸಬೇಕು. ಅನುಷ್ಠಾನ ಮಾಡುವ ಸಂಸ್ಥೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ **ಕರ್ನಾಟಕ ಆರ್ಥಿಕ ಸಂಹಿತೆ** ಮತ್ತು **ಕರ್ನಾಟಕ ಖಜಾನೆ ಸಂಹಿತೆಯಲ್ಲಿ** ಒಳಗೊಂಡಿರುವ ನಿಯಮ ಮತ್ತು ನಿಬಂಧನೆಗಳನ್ನು ತಪ್ಪದೇ ಅನುಸರಿಸಬೇಕು.

11. ಬ್ಯಾಚ್-III ಮತ್ತು ಬ್ಯಾಚ್-IV ರಡಿ ಮುಂದುವರೆಸಲಾಗುವ ಎಲ್ಲಾ ಯೋಜನೆಗಳ ಚಟುವಟಿಕೆಗಳನ್ನು ಅನುಮೋದಿತ ಯೋಜನಾ ಮೊತ್ತದ ಮಿತಿಯೊಳಗೆ (With in the existing approved project cost) ಅನುಷ್ಠಾನ ಮಾಡುವುದು.

12. ವಿಸ್ತೃತ ಯೋಜನಾ ವರದಿಯಲ್ಲಿ ಒಳಗೊಳ್ಳದ ಚಟುವಟಿಕೆಗಳನ್ನು/ಕಾಮಗಾರಿಗಳನ್ನು ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ತಾಂತ್ರಿಕ ಸಮಿತಿಯಲ್ಲಿ ಪರಿಶೀಲಿಸಿ ಅನುಮೋದನೆ ನೀಡಿ, ನಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ಪಡೆಯುವುದು.

13. ಮಣ್ಣು ಮತ್ತು ನೀರು ಸಂರಕ್ಷಣೆ ಘಟಕದಡಿ ಮೇಲ್‌ಸ್ತರದ ಉಪಚಾರಗಳಾದ ಹುಲ್ಲುಪಟ್ಟಿ, ಹುಲ್ಲು ಹಚ್ಚಿದ ಮಣ್ಣಿನ ತಡೆ, ಕಂಟಿತಡೆ (Shurb Check), ಕಿರು ಜಿನುಗು ಕೆರೆ, ಬೋಲ್ಡರ್ ತಡೆ, ರಬ್ಬಲ್ ತಡೆ, ಸಂಕನ್ ಪಾಂಡ್, ನೀರು ಇಂಗು ಗುಂಡಿ, ಗ್ಯಾಬಿಯನ್ ತಡೆ, ಡ್ರೈನೇಜ್ ಲೈನ್ ಚಟುವಟಿಕೆಗಳಾದ ತಡೆಅಣೆ/ಕಿಂಡಿಅಣೆ, ನಾಲಾಬದು ಇತ್ಯಾದಿ ಜಲಾನಯನ ಉಪಚಾರಗಳನ್ನು ಅನುಷ್ಠಾನ ಮಾಡುವುದು.

14. ರೈತರ ಜಮೀನುಗಳಲ್ಲಿ (ವ್ಯಕ್ತಿಗತ ಚಟುವಟಿಕೆಗಳು) ಅನುಷ್ಠಾನ ಮಾಡುವ ಕ್ಷೇತ್ರಬದು, ಕಂದಕದೊಂದಿಗೆ ಬದು, ಕೃಷಿ ಹೊಂಡ ಮತ್ತು ಅಲ್ಪ ಆಳದ ಬಾವಿ ಚಟುವಟಿಕೆಗಳನ್ನು ಯೋಜನೆಯಡಿ ಅನುಷ್ಠಾನ ಮಾಡುವುದು.

15. ರೈತರ ಜಮೀನುಗಳಲ್ಲಿ ಋತುಮಾನಾಧಾರಿತ ಕಾರ್ಯಕ್ರಮಗಳಾದ ತೋಟಗಾರಿಕೆ ಹಾಗೂ ಅರಣ್ಯೀಕರಣ ಚಟುವಟಿಕೆ/ಕಾಮಗಾರಿಗಳನ್ನು ಖಾತ್ರಿ ನೀರಾವರಿ ಸೌಲಭ್ಯವಿರುವ ಕಡೆ ಮಾತ್ರ ಅನುಷ್ಠಾನ ಮಾಡುವುದು.

16. ಆಸ್ತಿ ರಹಿತರಿಗೆ ಜೀವನೋಪಾಯ ಚಟುವಟಿಕೆ ಘಟಕದಡಿ ಸುತ್ತು ನಿಧಿ ವಿತರಣೆ ಕೈಗೊಳ್ಳುವುದು ಮತ್ತು ಉಪಚರಿಸಲಾದ ಯೋಜನಾ ಪ್ರದೇಶದಲ್ಲಿ ಉತ್ಪಾದನಾ ವ್ಯವಸ್ಥೆ ಘಟಕದಡಿಯಲ್ಲಿನ ಚಟುವಟಿಕೆಯನ್ನು ಅನುಷ್ಠಾನ ಮಾಡುವುದು.

17. ನೀರುಸಂಗ್ರಹಣಾ ವಿನ್ಯಾಸಗಳನ್ನು ಅನುಷ್ಠಾನಮಾಡಿದ ನಂತರ ಮಾಡಿದ ಕಾಮಗಾರಿಯ ವಿವರಗಳಾದ **ಅ)ಯೋಜನೆಯ ಹೆಸರು ಆ)ಕಾಮಗಾರಿಯ ಹೆಸರು ಇ)ಅನುಷ್ಠಾನ ಮಾಡಲಾದ ವರ್ಷ ಈ)ನೀರು ಸಂಗ್ರಹಣಾ**

ಸಾಮರ್ಥ್ಯ ಉ)ಅಕ್ಷಾಂಶ ಮತ್ತು ರೇಖಾಂಶದ ವಿವರಗಳು ಋ)ಕಾಮಗಾರಿಯ ಅಂದಾಜು ಮೊತ್ತದ ವಿವರಗಳನ್ನು ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುವಾಗ ಎನ್‌ಗ್ರೇವ್ ಮಾಡುವುದು ಹಾಗೂ ಪೇಂಟಿಂಗ್‌ನಲ್ಲಿ ಬರೆಯುವುದು ಹಾಗೂ/ಅಥವಾ ಪ್ರತ್ಯೇಕವಾಗಿ ನಾಮಫಲಕವನ್ನು ಹಾಕುವುದು ಕಡ್ಡಾಯ. ಇದಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಬೇಕು.

18. ಜಲಾನಯನ ಕಾಮಗಾರಿ/ಚಟುವಟಿಕೆಗಳ ಅಂತಿಮ ಸಂದಾಯಕ್ಕೆ ಮುನ್ನ ನಾಮಫಲಕ ಅಳವಡಿಸುವ ಬಗ್ಗೆ, ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಖಾತ್ರಿಪಡಿಸಿಕೊಂಡು ಅಂತಿಮ ಸಂದಾಯಕ್ಕೆ ಅನುಮೋದನೆ ನೀಡುವುದು.

19. ಪ್ರತಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗಲೇ ಒಂದು ಪ್ರತ್ಯೇಕ ಕಡತವನ್ನು ಇಟ್ಟು, ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.

| ಕ್ರ.ಸಂ | ನಿರ್ವಹಿಸ ಬೇಕಾಗಿರುವ ದಾಖಲಾತಿಗಳು |
|---|---|
| 1 | ಕ್ಷೇತ್ರ/ಸ್ಥಳ ತಪಾಸಣಾ ವರದಿ |
| 2 | ಕಾಮಗಾರಿ/ಚಟುವಟಿಕೆ ಪೂರ್ವದ ಜಿಪಿಎಸ್‌ಯುಕ್ತ ಛಾಯಚಿತ್ರ |
| 3 | ತಾಂತ್ರಿಕ ಮಂಜೂರಾತಿ ಪಡೆದ ಆದೇಶದೊಂದಿಗೆ ಅಂದಾಜು ಪತ್ರಿಕೆ |
| 4 | ಜಲಾನಯನ ಸಮಿತಿಯ ಅನುಮತಿ/ನಡವಳಿ/ಕಾರ್ಯಾದೇಶ |
| 5 | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪ್ರತಿ |
| 6 | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7 | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8 | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9 | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

20. ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಅನುಮೋದಿತ ಡಿ.ಪಿ.ಆರ್ ಪ್ರಕಾರ ಖಜಾನೆಯಿಂದ ಆರ್ಥಿಕ ವರ್ಷದ ಮಾರ್ಚ್ ಮಾಹೆಯೊಳಗೆ ಡ್ರಾ ಮಾಡಿ, ಸರಿಯಾಗಿ ಆಗಿರುವ ಜಲಾನಯನ ಚಟುವಟಿಕೆ/ಕಾಮಗಾರಿಗಳಿಗೆ ವೆಚ್ಚ ಭರಿಸುವುದು ಹಾಗೂ ಉಪಯೋಗಿತ ಪತ್ರವನ್ನು ಕೇಂದ್ರ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

**ಆಯುಕ್ತರು**
**ಜಲಾನಯನ ಅಭಿವೃದ್ಧಿ ಇಲಾಖೆ**
**ಹಾಗು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕೃಷಿ**
**ಮತ್ತು ತೋಟಗಾರಿಕೆ ಇಲಾಖೆ**

**ಇವರಿಗೆ,**

**ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಉಡುಪಿ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿತ್ರದುರ್ಗ, ಬೆಂಗಳೂರು, ಚಾಮರಾಜನಗರ, ವಿಜಯಾಪುರ ಮತ್ತು ಬಳ್ಳಾರಿ ಜಿಲ್ಲೆ, ಕೃಷಿ ಇಲಾಖೆ**

ಪ್ರತಿಯನ್ನು:

ಮುಖ್ಯ ಲೆಕ್ಕಾಧಿಕಾಗಳು, ಕೇಂದ್ರ ಕಛೇರಿ ರವರಿಗೆ ಕಳುಹಿಸುತ್ತಾ ಈ ದಿನವೇ ದಾವಣಗೆರೆ ಜಿಲ್ಲೆಗೆ ಅನುದಾನವನ್ನು ಹಾಸನ ಜಿಲ್ಲೆಯಿಂದ ಹಿಂಪಡೆದು, NMC ಯಲ್ಲಿ ಉಪ ಶೀರ್ಷಿಕೆವಾರು ಅಪ್‌ಲೋಡ್ ಮಾಡುವುದು ಹಾಗೂ ಅನುದಾನ ಜಮೆ ಆದ ಬಗ್ಗೆ ಖಾತ್ರಿಪಡಿಸಿಕೊಂಡು ಆಯುಕ್ತರಿಗೆ ವರದಿ ನೀಡಲು ಸೂಚಿಸಿದೆ.